ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್ ಎನ್ ರವರು
ಶೂನ್ಯವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವನೆಗೆ ಉತ್ತರ

ಪ್ರಶ್ನೆ: ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ದಿನನಿತ್ಯ ಕೊಲೆ, ಸುಲಿಗೆ, ಮರಳು ಮಾಫಿಯಾ ಡ್ರಗ್ಸ್ ಮಾಫಿಯಾ, ಅನೈತಿಕ ಚಟುವಟಿಕೆಗಳು ಅವ್ಯವಾಹತವಾಗಿ ನಡೆದು ರಾಜ್ಯವು ಕ್ರಿಮಿನಲ್‌ಗಳ ಸ್ವರ್ಗವಾಗುತ್ತಿದೆ. ಈ ಹಿಂದೆ ಚಿಕ್ಕೋಡಿಯ ಜೈನಮುನಿಗಳು, ಮೈಸೂರಿನ ಟಿ.ನರಸೀಪುರದಲ್ಲಿ ಯುವ ಬ್ರೀಗೇಡ್ ಕಾರ್ಯಕರ್ತನ ಹತ್ಯೆ ದುರ್ಘಟನೆ ಮಾಸುವ ಮುನ್ನವೇ ನಿನ್ನೆ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರ ಎಂ.ಡಿ ಮತ್ತು ಸಿ.ಇ.ಓ ಅವರ ಅವಳಿ ಕೊಲೆ ನಡೆದಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಎಗ್ಗಿಲ್ಲದೇ ಅನೈತಿಕ ಚಟುವಟಿಕೆಗಳು, ಮಾಫಿಯಾಗಳು ನಡೆಯುತ್ತಿದೆ. ಅಲ್ಲದೇ ಇತ್ತೀಚೆಗೆ ಹಾಸನದಲ್ಲಿ ಇಬ್ಬರು ಯುವಕರು ಕೂಡ ಪಿಸ್ತೂಲ್ ಹಿಡಿದು ನಗರದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಿರುತ್ತಾರೆ.

ಹೀಗೆ ರಾಜ್ಯದ ಅನೇಕ ಕಡೆಗಳಲ್ಲಿ ಹತ್ಯೆ, ಕೊಲೆ ಸುಲಿಗೆ ಮತ್ತು ದರೋಡೆ ಮಾಫಿಯಾ ಪ್ರಕರಣಗಳು ನಿರಂತರವಾಗಿ ನಡೆಯುತ್ತಿದೆ. ಈ ಘಟನೆಗಳನ್ನು ಮೇಲ್ನೋಟಕ್ಕೆ ನೋಡಿದರೆ ಕ್ರಿಮಿನಲ್‌ಗಳಿಗೆ ಪೊಲೀಸ್ ಇಲಾಖೆಯ ಭಯವಿಲ್ಲದಂತಾಗಿದೆ. ರಾಜ್ಯದಲ್ಲಿ ಅಶಾಂತಿ ಮತ್ತು ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸರ್ಕಾರ ಕೂಡಲೇ ಎಚ್ಚೆತ್ತು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಹಾಳುಗೆಡುವವರನ್ನು ಪತ್ತೇ ಹಚ್ಚಿ ಕಠಿಣ ಕ್ರಮ ಜರುಗಿಸಬೇಕು. ರಾಜ್ಯವನ್ನು ಕ್ರಿಮಿನಲ್‌ಗಳ ತಾಣವಾಗಲು ಬಿಡಬಾರದು, ರಾಜ್ಯದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಸರಿಯಾದ ರೀತಿಯಲ್ಲಿ ಕಾಪಾಡಬೇಕೆಂಬುದರ ಬಗ್ಗೆ.

ಉತ್ತರ: ಕಾನೂನು ಮತ್ತು ಸುವ್ಯವಸ್ಥೆ ಕುರಿತು ಈ ಕೆಳಗಿನಂತೆ ಪ್ರಕರಣಗಳು ದಾಖಲು ಮಾಡಲಾಗಿರುತ್ತದೆ.

ಅ) ರಾಜ್ಯದಲ್ಲಿ ಕೊಲೆ, ಸುಲಿಗೆ, ಡ್ರಗ್ಸ್ ಮಾಫಿಯಾ ಕುರಿತು ಈ ಕೆಳಕಂಡಂತೆ ಪ್ರಕರಣಗಳು ದಾಖಲಾಗಿರುತ್ತದೆ.

| ವರ್ಷ | ಕೊಲೆ ಪ್ರಕರಣ | ಸುಲಿಗೆ ಪ್ರಕರಣ | ಡ್ರಗ್ಸ್ ಪ್ರಕರಣ |
|---|---|---|---|
| 2021 | 1349 | 979 | 5787 |
| 2022 | 1376 | 1067 | 6398 |
| 2023 | 610 | 464 | 3181 |

ಆ) ಬೆಳಗಾವಿಯ ಚಿಕ್ಕೋಡಿಯಲ್ಲಿ ಹಿರೇಕೋಡಿ ನಂದಿಪರ್ವತ ಆಶ್ರಮದ ನಂದಿ ಮಹಾರಾಜ ಜೈನಮುನಿಗಳ ಹತ್ಯೆಯ ವಿವರ ಕೆಳಗಿನಂತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಿರೇಕೋಡಿ ಎಂಬ ಆಶ್ರಮದಲ್ಲಿ ಆಚಾರ್ಯ ಕಾಮಕುಮಾರ ನಂದಿ ರವರು ಕಾಣೆಯಾದ ಬಗ್ಗೆ ದಿನಾಂಕ: 07.07.2023 ರಂದು ಚಿಕ್ಕೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನುಷ್ಯ ಕಾಣೆ ಪ್ರಕರಣ

ದಾಖಲಾಗಿ, ತನಿಖೆಯನ್ನು ಕೈಕೊಂಡ ಕಾಲಕ್ಕೆ ಸದರಿ ಮುನಿಗಳು ಕೊಲೆಯಾದ ಬಗ್ಗೆ ತನಿಖೆಯಿಂದ ತಿಳಿದು ಬಂದಿದ್ದು, ಕೂಡಲೇ ಪೊಲೀಸ್‌ರೇ ಸತ: ಪಿರ್ಯಾಧಿದಾರರಾಗಿ ಚಿಕ್ಕೋಡಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:148/2023 ಕಲಂ 302, 201 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಂಡಿದ್ದು, ಸದರಿ ತನಿಖೆಯಲ್ಲಿ ನಾರಾಯಣ ಬಸಪ್ಪಾ ಮಾಳಿ, ಖಟಕಭಾವಿ, ರಾಯಬಾಗ ತಾಲ್ಲೂಕು, ಹಿರೇಕೋಡಿ ಮತ್ತು ಹಸನಸಾಬ ಮಕ್ಬುಲ್ ದಾಲಾಯತ ರವರನ್ನು ವಶಕ್ಕೆ ಪಡೆದು ತನಿಖೆ ಕೈಕೊಳ್ಳಲಾಗಿರುತ್ತದೆ. ಸದರಿಯವರು ಕೊಲೆ ಮಾಡಿರುವ ಬಗ್ಗೆ ತನಿಖೆಯಿಂದ ತಿಳಿದು ಬಂದಿರುತ್ತದೆ. ಪ್ರಕರಣದ ತನಿಖೆಯನ್ನು ಮಾನ್ಯ ಎಡಿಜಿಪಿ ದರ್ಜೆಯ ಅಧಿಕಾರಿಗಳ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಂತೆ ಒರ್ವ ಡಿಎಸ್‌ಪಿ ದರ್ಜೆ ಅಧಿಕಾರಿಯನ್ನು ನಿಯೋಜಿಸಲಾಗಿದೆ. ಪ್ರಸ್ತುತ ಬೆಳಗಾವಿ ಜಿಲ್ಲೆಯಲ್ಲಿ ಎಲ್ಲಾ ಮುಂಜಾಗ್ರತಾ ಕ್ರಮವಹಿಸಿ ಸೂಕ್ತ ಬಂದೋಬಸ್ತ್ ಮಾಡಿ ಶಾಂತ ಪರಿಸ್ಥಿತಿಯಿಂದ ಇರುತ್ತದೆ.

**ಇ) ಟಿ.ನರಸೀಪುರದಲ್ಲಿ ಕ್ಷುಲ್ಲಕ ಕಾರಣಕ್ಕೆ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕ್ ಹತ್ಯೆ ನಡೆದಿರುವ ಕುರಿತು.**

**ಉತ್ತರ: ಮೈಸೂರು ಜಿಲ್ಲೆ ಟಿ.ನರಸೀಪುರದಲ್ಲಿ ನಡೆದ ಹನುಮ ಜಯಂತಿಯ ಸಮಾರಂಭದಲ್ಲಿ ಯುವಕ ವೇಣುಗೋಪಾಲ ರವರ ಹತ್ಯೆ ಪ್ರಕರಣ ಕುರಿತು:**

1. ವೇಣುಗೋಪಾಲ್ ಬಿನ್ ನಾಗರಾಜು, 31 ವರ್ಷ, ನಾಯಕ ಜನಾಂಗ, ಚಿಕ್ಕಅಂಗಡಿ ಬೀದಿ, ಟಿ.ನರಸೀಪುರ ಪಟ್ಟಣ ಎಂಬುವರು ದಿನಾಂಕ; 09.07.2023 ರಂದು ಹತ್ಯೆಯಾಗಿರುವ ಬಗ್ಗೆ ಪಿರ್ಯಾದಿ ರಾಮಾನುಜಂ ರವರು ನೀಡಿದ ದೂರಿನ ಮೇರೆಗೆ ಟಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 173/2023 ಕಲಂ 143, 147, 148, 504, 307, 302 ರೆ.ವಿ. 149 ಐ.ಪಿ.ಸಿ ಮತ್ತು ಕಲಂ 3(2) ಗಿ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ 2015 ರ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

2. ಘಟನಾ ಸ್ಥಳಕ್ಕೆ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರು ಹಾಗೂ ಪೊಲೀಸ್ ಉಪ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ರವರು ಭೇಟಿ ನೀಡಿ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಆಯಾಮಗಳಲ್ಲಿ ತನಿಖೆ ಮಾಡುವ ಬಗ್ಗೆ ಸೂಕ್ತ ನಿಗಾ ನಿರ್ದೇಶನಗಳನ್ನು ನೀಡಿ, ನಿಗಾ ವಹಿಸಲಾಗಿದೆ.

3. ದಿನಾಂಕ:10.07.2023 ರಂದು ಮೈಸೂರಿನ ಸರ್ಕಾರಿ ಮೆಡಿಕಲ್ ಶವಗಾರದಲ್ಲಿ ಮೃತ ವೇಣುಗೋಪಾಲ್ ರವರ ವೈದ್ಯಕೀಯ ಮರಣೋತ್ತರ ಶವಪರೀಕ್ಷೆ ನಡೆದಿದ್ದು, ನಂತರ ಮೃತ ದೇಹವನ್ನು ಅಂತ್ಯಸಂಸ್ಕಾರಕ್ಕಾಗಿ ಟಿ.ನರಸೀಪುರಕ್ಕೆ ತೆಗೆದುಕೊಂಡು ಹೋಗಿದ್ದು, ಅಂತ್ಯಸಂಸ್ಕಾರವು ಶಾಂತಿಯುತವಾಗಿ ಮುಗಿದಿರುತ್ತದೆ.

4. ಮೃತ ವೇಣುಗೋಪಾಲನ ಅಂತ್ಯಸಂಸ್ಕಾರದ ನಂತರ ಮೃತನ ಪತ್ನಿ ಮತ್ತು ಸಂಬಂಧಿಕರು ಹಾಗೂ ಸ್ಥಳೀಯ ಮುಖಂಡರಗಳ ಜೊತೆ ಸಂಪರ್ಕದಲ್ಲಿದ್ದು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

5. ದಿನಾಂಕ:10.07.2023 ರಂದು ಈ ಪ್ರಕರಣದಲ್ಲಿ ಈಗಾಗಲೇ ಈ ಕೆಳಕಂಡ 06 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ.
(1) ಮಣಿಕಂಠಸ್ವಾಮಿ @ ಮಣಿ @ ಕೂಳೆ ಮಣಿ ಬಿನ್ ಸಿದ್ದಪ್ಪ, (2) ಸಂದೇಶ ಕುಮಾರ್ ಬಿನ್ ಸ್ವಾಮಿನಾಥನ್, (3) ಅನಿಲ್ ಬಿನ್ ಲೇಟ್.ಮಹದೇವ, (4) ಶಂಕರ @ ಶಂಕರೇಗೌಡ @ ತುಪ್ಪ ಬಿನ್ ಮಹದೇವಪ್ಪ, (5) ಮಂಜು @ ಮಂಜುನಾಥ್ ಬಿನ್ ಪುಟ್ಟಸ್ವಾಮಿ, (6) ಹ್ಯಾರಿಸ್ @ ಮಹಮದ್ ಹ್ಯಾರಿಸ್ ಬಿನ್ ಸರ್ತಾಜ್ ಪಾಷ ರವರುಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಶೀಘ್ರವಾಗಿ ತನಿಖೆ ಪೂರೈಸಿ ಎಲ್ಲಾ ಆರೋಪಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುವುದು.

6. ಈ ಪ್ರಕರಣವು ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಾಗಿದ್ದು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಪತ್ರ ವ್ಯವಹರಿಸಲಾಗಿದೆ.

7. ಟಿ.ನರಸೀಪುರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಗುಪ್ತಮಾಹಿತಿ ಸಿಬ್ಬಂದಿರವರು ಹನುಮ ಜಯಂತಿಯ ಬಂದೋಬಸ್ತ್ ಕರ್ತವ್ಯದ ಸಮಯದಲ್ಲಿ ಸೂಕ್ತ ಮುನ್ನೆಚ್ಚರಿಕೆ ಹಾಗೂ ಮುಂಗಡ ಮಾಹಿತಿ ಸಂಗ್ರಹಣೆ ಮಾಡದೇ ಇರುವ ಬಗ್ಗೆ ಹಾಗೂ ಮೇಲಾಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ತಿಳಿಸದೇ ನಿರ್ಲಕ್ಷ್ಯತೆ ವಹಿಸಿರುವ ಬಗ್ಗೆ ಸದರಿಯವರುಗಳನ್ನು ಅಮಾನತ್ತುಪಡಿಸಿ ಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆ.

8. ಟಿ.ನರಸೀಪುರ ಪಟ್ಟಣದಲ್ಲಿ ಪ್ರಸ್ತುತ ಶಾಂತ ಪರಿಸ್ಥಿತಿ ಇದ್ದು, ಮುಂಜಾಗ್ರತಾ ಕ್ರಮವಾಗಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮುಂದುವರೆಸಲಾಗಿದೆ.

**ಈ) ಇತ್ತೀಚಿಗೆ ಹಾಸನದಲ್ಲಿ ಇಬ್ಬರು ಯುವಕರು ಪಿಸ್ತೂಲ್ ಹಿಡಿದು ನಗರದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಿರುವ ಸಂಬಂಧ ಹಾಸನ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದ ವಿವರ:**

ದಿನಾಂಕ:30.06.2023 ರಂದು ಪಿರ್ಯಾದುದಾರರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸುಮಾರು 03:00 ಗಂಟೆ ಸಮಯದಲ್ಲಿ ಇಬ್ಬರು ಯುವಕರು ಬೈಕನಲ್ಲಿ ತಲೆಗೆ ಹೆಲ್ಮೆಟ್ ಧರಿಸದೆ ಬೈಕುನ್ನು ಜಿಗ್–ಜಾಗ್ ರೀತಿಯಲ್ಲಿ ವೇಗವಾಗಿ ಚಲಾಯಿಸಿಕೊಂಡು, ಹಿಂಬದಿಯಲ್ಲಿದ್ದ ಯುವಕ ಕೈಯಲ್ಲಿ ಪಿಸ್ತೂಲ್ ರೀತಿಯ ವಸ್ತುವನ್ನು ಹಿಡಿದುಕೊಂಡು ಅಜಾಗರುಕತೆಯಿಂದ ಬೈಕ್ ಚಲಾಯಿಸುವ ವಿಡಿಯೋವನ್ನು ಇನ್ಸ್ಟಾಗ್ರಾಂ ಐಡಿ–ನಲ್ಲಿ ಹರಿಬಿಟಿದ್ದು, ಇದನ್ನು ವಿಚಾರಣೆ ಮಾಡಿ ಅವರ ಹೆಸರು ಮತ್ತು ವಿಳಾಸಗಳನ್ನು ತಿಳಿದು (1) ಸಯ್ಯದ್ ಜೈನ್

ಬಿನ್ ನವೇದ್ ಮತ್ತು (2) ಶೋಯಬ್ ಅಹಮ್ಮದ್ ಬಿನ್ ಸಾದಿಕ್ ಅಹಮ್ಮದ್ ಎಂದು ತಿಳಿದುಬಂದಿದ್ದು, ಅವರುಗಳನ್ನು ಠಾಣೆಗೆ ಕರೆಸಿ ವಿಚಾರಿಸಲಾಗಿ ವಿಡಿಯೋದಲ್ಲಿದ್ದರು ತಾವೇ ಎಂದು ಒಪ್ಪಿಕೊಂಡಿದ್ದು, ಅವರು ಬಳಸಿದ ಬೈಕ್ ನಂಬರ್ ಕೆಎ-13-ಇಕೆ-5279 ಆಗಿರುತ್ತದೆ. ಅವರು ಬಳಸಿದ ಪಿಸ್ತೂಲ್ ಪ್ಲಾಸ್ಟಿಕ್ ಪಿಸ್ತೂಲ್ ಎಂದು ತಿಳಿದುಬಂದಿರುತ್ತದೆ. ಮತ್ತು ಅವರು ಬಳಸಿರುವ ಮೊಬೈಲ್ ಹಾಗೂ ಪ್ಲಾಸ್ಟಿಕ್ ಪಿಸ್ತೂಲ್ ಅನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಸದರಿರವರ ವಿರುದ್ಧ ಹಾಸನ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 60/2023 ಕಲಂ: 279 ಐ.ಪಿ.ಸಿ & 129.189 ಐಎಂಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿ, ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಸದರಿ ಪ್ರಕರಣವು ತನಿಖೆಯಲ್ಲಿರುತ್ತದೆ.

**ಉ) ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರ ಎಂ.ಡಿ ಮತ್ತು ಸಿ.ಇ.ಓ ರವರುಗಳ ಕೊಲೆ ನಡೆದಿರುವ ಬಗ್ಗೆ:**

ದಿನಾಂಕ 11.07.2023 ರಂದು ಪಿರ್ಯಾದುದಾರರಾದ ಶ್ರೀ ಶಂಕರ್‌ನಾರಾಯಣ ಎಂಬುವರು ಅಮೃತಹಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ತಾನು ಹೆಬ್ಬಾಳ ಕೆಂಪಾಪುರದ ಪಂಪಾ ಎಕ್ಸ್‌ಟೆನ್ಷನ್ 6ನೇ ಕ್ರಾಸ್ ನಂ.21 ರಲ್ಲಿರುವ ಏರೋನಿಕ್ಸ್ ಮೀಡಿಯಾ ಪ್ರೈ.ಲಿ. ಕಂಪನಿಯಲ್ಲಿ ಸೀನಿಯರ್ ಸೇಲ್ಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುತ್ತೇನೆ. ನಮ್ಮ ಕಂಪನಿಗೆ ಫಣೀಂದ್ರ ಸುಬ್ರಮಣ್ಯಂ ಎಂಬುವರು ಎಂ.ಡಿ.ಯಾಗಿದ್ದು, ವಿನುಕುಮಾರ್ ಎಂಬುವರು ಸಿ.ಇ.ಓ. ಆಗಿರುತ್ತಾರೆ. ನಾವೆಲ್ಲರೂ ಈ ಹಿಂದೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಅರುಣ್‌ಕುಮಾರ್ ಎಂಬುವರ ಒಡೆತನದ ದೇಶ್‌ಕಾಲ್ ನೆಟ್‌ವರ್ಕ್ ಪ್ರೈ.ಲಿ. (G-net) ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು. ನಂತರ ಫಣೀಂದ್ರ ಸುಬ್ರಮಣ್ಯಂ ಮತ್ತು ವಿನುಕುಮಾರ್ ರವರು ಸದರಿ ಕಂಪನಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಬಂದು ಏರೋನಿಕ್ಸ್ ಮೀಡಿಯಾ ಪ್ರೈ.ಲಿ. ಕಂಪನಿ ಓಪನ್ ಮಾಡಿದ್ದು, G-net ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ನಾನು ಹಾಗೂ ಇತರೆ 8-10 ಜನರು ಅಲ್ಲಿ ಕೆಲಸ ಬಿಟ್ಟು ಏರೋನಿಕ್ಸ್ ಮೀಡಿಯಾ ಪ್ರೈ.ಲಿ. ಕಂಪನಿಗೆ ಸೇರಿಕೊಂಡು ಕೆಲಸ ಮಾಡುತ್ತಿದ್ದೆವು. ಬಿಸಿನೆಸ್ ತುಂಬಾ ಚೆನ್ನಾಗಿ ನಡೆಯುತಿತ್ತು, ಫಣೀಂದ್ರ ರವರ ಹೊಸ ಕಂಪನಿ ಓಪನ್ ಆದ ನಂತರ ದೇಶ್‌ಕಾಲ್ ನೆಟ್‌ವರ್ಕ್ ಪ್ರೈ.ಲಿ. (G-net) ಕಂಪನಿ ಬಿಸಿನೆಸ್ ಡಲ್ ಆಗಿದ್ದು ಇದರಿಂದ ದೇಶ್‌ಕಾಲ್ ನೆಟ್‌ವರ್ಕ್ ಪ್ರೈ.ಲಿ. (G-net) ಕಂಪನಿಯ ಮಾಲೀಕರಾದ ಅರುಣ್‌ಕುಮಾರ್ ರವರು ಏರೋನಿಕ್ಸ್ ಮೀಡಿಯಾ ಪ್ರೈ.ಲಿ. ಕಂಪನಿಯ ಎಂ.ಡಿ.ಫಣೀಂದ್ರ ಸುಬ್ರಮಣ್ಯಂ ಮತ್ತು ಸಿ.ಇ.ಓ. ವಿನುಕುಮಾರ್ ರವರ ಮೇಲೆ ದ್ವೇಷ ಕಾರುತ್ತಿದ್ದರು. ಇದೇ ದ್ವೇಷದಿಂದ ದೇಶ್‌ಕಾಲ್ ನೆಟ್‌ವರ್ಕ್.ಪ್ರೈ.ಲಿ. (G-net) ಕಂಪನಿಯ ಕೆಲಸಗಾರನಾದ ಫಿಲಿಕ್ಸ್ ಮತ್ತು ಆತನ ಸ್ನೇಹಿತರಾದ ಸಂತು ಹಾಗೂ ಮತ್ತೊಬ್ಬ ಅಪರಿಚಿತ ವ್ಯಕ್ತಿಯು ಸೇರಿ ಫಣೀಂದ್ರ ಸುಬ್ರಮಣ್ಯಂ ಮತ್ತು ವಿನುಕುಮಾರ್ ರವರನ್ನು ಕೊಲೆ ಮಾಡಲು ಸಂಚು ರೂಪಿಸಿಕೊಂಡು ದಿನಾಂಕ 11/07/2023 ರಂದು ಮಧ್ಯಾಹ್ನ ಸುಮಾರು 3-30 ಗಂಟೆಗೆ ಏರೋನಿಕ್ಸ್ ಮೀಡಿಯಾ ಪ್ರೈ.ಲಿ. ಕಂಪನಿಗೆ ಬಂದು ಫಿಲಿಕ್ಸ್ ಎಂಬುವನು ಮಚ್ಚಿನಿಂದ ಫಣೀಂದ್ರ ಸುಬ್ರಮಣ್ಯಂ ತಲೆ ಮತ್ತು ಇತರೆ ಕಡೆಗಳಿಗೆ ಹೊಡೆದು ಮಾರಣಾಂತಿಕ ರಕ್ತಗಾಯಗಳನ್ನು ಉಂಟು ಮಾಡಿದ್ದು, ಸಂತು ಹಾಗೂ ಮತ್ತೊಬ್ಬನು ಚಾಕುಗಳಿಂದ ಫಣೀಂದ್ರ ಸುಬ್ರಮಣ್ಯಂ ರವರ ಬೆನ್ನಿಗೆ ಹಾಗೂ ಮುಂತಾದ ಕಡೆಗಳಿಗೆ ತಿವಿದು

ಮಾರಣಾಂತಿಕ ರಕ್ತಗಾಯಗಳನ್ನು ಉಂಟುಮಾಡಿರುತ್ತಾರೆ. ನಂತರ ಫಿಲಿಕ್ಸ್ ಎಂಬುವನು ಮಚ್ಚಿನಿಂದ ಮತ್ತು ಸಂತು ಹಾಗೂ ಮತ್ತೊಬ್ಬನು ಚಾಕುಗಳಿಂದ ವಿನುಕುಮಾರ್ ರವರ ತಲೆ ಮುಂತಾದ ಕಡೆಗಳಿಗೆ ಮಾರಣಾಂತಿಕ ರಕ್ತಗಾಯಗಳನ್ನು ಉಂಟು ಮಾಡಿ ಓಡಿ ಹೋಗಿರುತ್ತಾರೆ. ಗಾಯಗೊಂಡಿದ್ದ ಫಣೀಂದ್ರ ಸುಬ್ರಮಣ್ಯಂ ರವರನ್ನು ಸಮೀಪದ ಮಣಿಪಾಲ್ ಆಸ್ಪತ್ರೆಗೆ, ವಿನುಕುಮಾರ್ ರವರನ್ನು ಆಸ್ಟರ್ ಸಿ.ಎಂ.ಐ. ಆಸ್ಪತ್ರೆಗೆ ದಾಖಲಿಸಿದ್ದು, ಆಸ್ಪತ್ರೆಯಲ್ಲಿ ಫಣೀಂದ್ರ ಸುಬ್ರಮಣ್ಯಂ ಮತ್ತು ವಿನುಕುಮಾರ್ ರವರು ಮೃತಪಟ್ಟಿರುತ್ತಾರೆ. ಸದರಿ ಕೊಲೆಯನ್ನು ದೇಶ್‌ಕಾಲ್ ನೆಟ್‌ವರ್ಕ್.ಪ್ರೈ.ಲಿ. (G-net) ಕಂಪನಿಯ ಮಾಲೀಕರಾದ ಅರುಣ್‌ಕುಮಾರ್ ಎಂಬುವವರು ಮಾಡಿಸಿರುವ ಬಗ್ಗೆ ಅನುಮಾನ ಇರುತ್ತದೆ. ಆದ್ದರಿಂದ ಫಣೀಂದ್ರ ಸುಬ್ರಮಣ್ಯಂ ಮತ್ತು ವಿನುಕುಮಾರ್ ರವರನ್ನು ಕೊಲೆ ಮಾಡಿದ ಫಿಲಿಕ್ಸ್, ಸಂತು ಹಾಗೂ ಮತ್ತೊಬ್ಬ ಅಪರಿಚಿತ ವ್ಯಕ್ತಿ ಹಾಗೂ ಶಂಕಿತ ಆಸಾಮಿ ಅರುಣ್‌ಕುಮಾರ್ ಎಂಬುವವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ನೀಡಿದ ದೂರಿನ ಮೇರೆಗೆ ದಿನಾಂಕ 11-07-2023 ರಂದು 17-30 ಗಂಟೆಗೆ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 186/2023 ಕಲಂ 302, 120(ಬಿ) ಸಹಿತ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಪ್ರಕರಣದಲ್ಲಿ ತನಿಖೆ ಕೈಗೊಂಡು ದಿನಾಂಕ 11.07.2023 ರಂದು ರಾತ್ರಿ 11:00 ಗಂಟೆಯ ಸಮಯದಲ್ಲಿ ಕುಣಿಗಲ್ ಬಳಿ ಆರೋಪಿತರಾದ (1) ಶಬರೀಶ @ ಫಿಲಿಕ್ಸ್ @ ಜೋಕರ್ ಬಿನ್ ಪೆಂಚಲಯ್ಯ, 27 ವರ್ಷ, ವಾಸ: ಬನ್ನೇರುಘಟ್ಟ ರೋಡ್, ದೇವರಚಿಕ್ಕನಹಳ್ಳಿ, ಬೆಂಗಳೂರು. ಖಾಯಂ ವಿಳಾಸ: ನಂ. 108, "ಬಿ" ಬ್ಲಾಕ್, ಲಕ್ಷ್ಮಿ ಟಾಕೀಸ್ ಹತ್ತಿರ, ಬೊಮ್ಮನ ಕಟ್ಟೆ, ಶಿವಮೊಗ್ಗ ತಾಲ್ಲೂಕು & ಜಿಲ್ಲೆ. (2) ಸಂತೋಷ್ @ ಸಂತು ಬಿನ್ ಶ್ರೀನಿವಾಸ್ 26 ವರ್ಷ ವಾಸ: ನಂ. 205, 5ನೇ ಮೇನ್, 4ನೇ ಕ್ರಾಸ್, ಮಾರೇನಹಳ್ಳಿ, ಎಂ.ಟಿ.ಬಿ ಏರಿಯಾ, ಜಯನಗರ 9ನೇ ಬ್ಲಾಕ್, ಬೆಂಗಳೂರು. (3) ವಿನಯ್‌ರೆಡ್ಡಿ. ವಿ ಬಿನ್ ವೆಂಕಟರೆಡ್ಡಿ 22 ವರ್ಷ ವಾಸ: ಓಂ ಶಕ್ತಿ ದೇವಸ್ಥಾನದ ಪಕ್ಕ, ರೂಪೇನ ಅಗ್ರಹಾರ, ಎನ್.ಜಿ.ಆರ್. ಲೇಔಟ್, 16ನೇ ಕ್ರಾಸ್, ರೆಡ್ಡಿ ಸ್ಕೂಲ್ ಹತ್ತಿರ, ಬೊಮ್ಮನಹಳ್ಳಿ, ಬೆಂಗಳೂರು ರವರುಗಳನ್ನು ವಶಕ್ಕೆ ಪಡೆದು ದಸ್ತಗಿರಿ ಮಾಡಿರುತ್ತದೆ. ಪ್ರಕರಣದ (4) ಆರೋಪಿತನಾದ ಅರುಣ್‌ಕುಮಾರ್ ಈತನ ಪತ್ತೆಕಾರ್ಯ ಮುಂದುವರೆದಿರುತ್ತದೆ. ಶೀಘ್ರವಾಗಿ ಆರೋಪಿತನನ್ನು ಪತ್ತೆಮಾಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

**ಊ) ರಾಜ್ಯದಲ್ಲಿ ಕೊಲೆ, ಸುಲಿಗೆ ಮತ್ತು ದರೋಡೆಯಂತಹ ಘೋರ ಅಪರಾಧಗಳನ್ನು ತಡೆಗಟ್ಟಲು ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಶಾಂತಿಯುತವಾಗಿ ಕಾಪಾಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**

**ಬೀಟ್ ವ್ಯವಸ್ಥೆ (Beat System)**

- ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹೊಸ ಬೀಟ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ.
- ಈ ಹೊಸ ಬೀಟ್ ಪದ್ಧತಿಯಲ್ಲಿ ಪ್ರತಿ ಪೊಲೀಸ್ ಠಾಣಾ ಸರಹದ್ದುಗಳ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ನಡೆಸಿ ಅಪರಾಧ ತಡೆಗಟ್ಟಲು ಎಚ್ಚರ ವಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

- ಜಿಲ್ಲೆಯಲ್ಲಿ ಗ್ರಾಮ/ಬಡಾವಣೆ ಗಸ್ತನ್ನು ಪರಿಣಾಮಕಾರಿಯಾಗಿ ಜಾರಿಗಳಿಸಲಾಗುತ್ತಿದೆ. ಬೀಟ್ ಸಭೆಗಳನ್ನು ನಡೆಸಲಾಗುತ್ತಿದೆ. ಈ ಸಭೆಗಳಲ್ಲಿ ಹಿರಿಯ ಅಧಿಕಾರಿಗಳು ಸಹ ಭಾಗವಹಿಸುತ್ತಿರುತ್ತಾರೆ. ಸಾರ್ವಜನಿಕರು ತಿಳಿಸುವ ಸಮಸ್ಯೆಗಳನ್ನು ಬಗೆಹರಿಸಲು ಕ್ರಮವಹಿಸಲಾಗುತ್ತಿದೆ. ಇತರೆ ಇಲಾಖೆ ಸಮಸ್ಯಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟವರಿಗೆ ಪತ್ರವ್ಯವಹಾರ ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಬೀಟ್ ವ್ಯವಸೆಯನ್ನು ಬಲಪಡಿಸುವ ಹಿನ್ನಲೆಯಲ್ಲಿ ಸ್ಮಾರ್ಟ್ ಇ-ಬೀಟ್ ತಂತ್ರಾಂಶವನ್ನು ವ್ಯವಸ್ಥಿತವಾಗಿ ಜಾರಿಗೊಳಲಾಗುತ್ತಿದೆ.

**ಸಿಸಿ ಟಿವಿ ಅಳವಡಿಸಿರುವ ಕುರಿತು (CC TV Installation)**

- ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆ ಮತ್ತು ಅಪರಾಧ ಹಿನ್ನೆಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗುತ್ತಿದೆ. ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.

**ಸೈಬರ್ ಅಪರಾಧಗಳು (Cyber Crime Prevention)**

- ಸೋಶಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್ ತೆರೆದು ಸಾಮಾಜಿಕ ಜಾಲತಾಣಗಳಲ್ಲಿ ಕೋಮು ಸಾಮರಸ್ಯ ಕದಡುವ ವ್ಯಕ್ತಿಗಳ ಮೇಲೆ ಹಾಗೂ ಸುಳ್ಳು ಸಂದೇಶ ಭಿತ್ತರಿಸುವವರ ಮೇಲೆ ನಿಗಾವಹಿಸಿದ್ದು, ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.
- ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ **'ಸೈಬರ್ ಕ್ರೈಂ ಜಾಗೃತಿ ದಿವಸ'** ಆಚರಣೆ ಮಾಡುತ್ತಿದ್ದು, ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಸೈಬರ್ ಅಪರಾಧ ತಡೆಗಟ್ಟುವ ಕುರಿತು ಜಾಗೃತಿ ಕಾರ್ಯಾಗಾರಗಳನ್ನು ಏರ್ಪಡಿಸಿ ವಂಚನೆಗೆ ಒಳಗಾದಂತೆ ಸಲಹಾ ಸೂಚನೆಗಳನ್ನು ನೀಡಲಾಗುತ್ತಿದೆ.
- ಸರ್ಕಾರದಿಂದ ನ್ಯಾಷನಲ್ ಸೈಬರ್ ಕ್ರೈಂ ರಿಪೋರ್ಟಿಂಗ್ ಪೋರ್ಟಲ್ ಪ್ರಾರಂಭಿಸಿದ್ದು, ಸಾರ್ವಜನಿಕರು ತಮಗೆ ವಂಚನೆಯಾದ ಬಗ್ಗೆ ಈ ಪೋರ್ಟಲ್ ಮುಖಾಂತರ ದೂರು ಸಲ್ಲಿಸಬಹುದಾಗಿದೆ.
- ಆನ್‌ಲೈನ್ ಮೂಲಕ ಸಾಲ ನೀಡಿ ಸಾರ್ವಜನಿಕರಿಗೆ ವಂಚನೆ ಮಾಡುವ ಆಪ್‌ಗಳ ಮೇಲೆ ನಿಗಾವಹಿಸಲು ಜಿಲ್ಲಾ ಮಟ್ಟದಲ್ಲಿ ಸಿಐಎನ್ ಪಿಎಸ್ ತೆರೆದಿದ್ದು, ಇದಕ್ಕೆ ಪಿ.ಐ ದರ್ಜೆ ಅಧಿಕಾರಿಯನ್ನು ನೇಮಿಸಲಾಗಿದೆ. ಈ ಆಪ್‌ಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳಲಾಗುತ್ತಿರುತ್ತದೆ.
- ಆನ್ ಲೈನ್ ಮೂಲಕ ಸಾಲ ನೀಡಿ ಸಾರ್ವಜನಿಕರಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ವಿವಿಧ ಬಗೆಯ ಆಪ್‌ಗಳನ್ನು ಗೂಗಲ್ ಪ್ಲೇ ಸ್ಟೋರ್ ನಿಂದ ತೆಗೆದು ಹಾಕುವಂತೆ ಗೂಗಲ್ ಸರ್ವಿಸ್ ಪ್ರಾವೈಡರ್‌ಗೆ ಸಿಇಎನ್ ಪೊಲೀಸ್ ಠಾಣೆಯಿಂದ ಇ-ಮೇಲ್ ಸಂದೇಶವನ್ನು ರವಾನಿಸಲಾಗಿರುತ್ತದೆ. ಸದರಿ ಆಪ್‌ಗಳನ್ನು ಗೂಗಲ್‌ನವರು ಡಿಲೀಟ್ ಮಾಡುವ ಬಗ್ಗೆ ಕ್ರಮಹಿಸಿರುತ್ತಾರೆ.

- ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಕಾಲೇಜುಗಳಿಗೆ ಭೇಟಿ ನೀಡಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೈಬರ ಅಪರಾಧಗಳ ಬಗ್ಗೆ ಹಾಗೂ ಆನ್‌ಲೈನದಲ್ಲಿ ನಡೆಯುವ ವಂಚನೆ ಬಗ್ಗೆ ತಿಳುವಳಿಕೆ ಹೇಳಿದ್ದು ಮತ್ತು ಭಿತ್ತಿ ಪತ್ರಗಳನ್ನು ಹಂಚಿದ್ದು ಇರುತ್ತದೆ.
- ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

## ರೌಡಿ ಚಟುವಟಿಕೆ ನಿಯಂತ್ರಿಸುವ ಕುರಿತು (Controlling Rowdy Activities)

- ಎಂ.ಓ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.
- ಅಪರಾಧಿಗಳ ಮೇಲೆ ಎಮ್‌ಓಬಿ ಹಾಗೂ ರೌಡಿ ಶೀಟ್ ತೆಗೆಯಲಾಗುವುದು. ಸಾರ್ವಜನಿಕ ನೆಮ್ಮದಿಗೆ ಭಂಗವನ್ನು ಉಂಟು ಮಾಡಬಹುದಾದ ರೌಡಿ ಆಸಾಮಿಗಳನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಗಡಿಪಾರು ಮಾಡಲಾಗಿದೆ ಹಾಗೂ ಗೂಂಡಾ ಕಾಯ್ದೆ ಅಡಿಯಲ್ಲಿಯೂ ಸಹ ಕ್ರಮಕೈಗೊಳ್ಳಲಾಗುವುದು.
- ದ್ವೇಷ ಭಾಷಣ, ನೈತಿಕ್ ಪೊಲೀಸ್‌ಗಿರಿ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಹ ಕೃತ್ಯಗಳಲ್ಲಿ ತೊಡಗಿ ಕೋಮು ಸಾಮರಸ್ಯ ಕದಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

## ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವಿಕೆ (Control on Illegal Activities)

- ಅಕ್ರಮ ಚಟುವಟಿಕೆಗಳಾದ ಮಟ್ಕಾ, ಜೂಜು, ಕ್ರಿಕೇಟ್ ಬೆಟ್ಟಿಂಗ್ ಇತ್ಯಾದಿ ಆಟಗಳನ್ನು ಪತ್ತೆ ಮಾಡಿ ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ.
- ಅಕ್ರಮ ಮರಳು ಸಾಗಾಣಿಕೆ ತಡೆಯಲು ಜಿಲ್ಲೆಯ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಅಳವಡಿಸಿ ಹಗಲು ಮತ್ತು ರಾತ್ರಿ ಸಮಯದಲ್ಲಿ ಸಂಶಯಿತ ವಾಹನಗಳ ತಪಾಸಣೆ ನಡೆಸಲಾಗುತ್ತಿದೆ.
- ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆಯ ಕುರಿತಂತೆ ಮಾಹಿತಿ ಕಲೆ ಹಾಕುವಂತೆ ಠಾಣಾಧಿಕಾರಿಗಳಿಗೆ, ಬೀಟ್ ಸಿಬ್ಬಂದಿಗಳಿಗೆ ಹಾಗೂ ಗುಪ್ತ ಮಾಹಿತಿ ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ
- ಜಿಲ್ಲಾ ಪೊಲೀಸ್ ವ್ಯಾಪ್ತಿಯ ಬೀಟ್ ಸಿಬ್ಬಂದಿಗಳು ತಮ್ಮ ಬೀಟ್ ಸಭೆಗಳಲ್ಲಿ ಮಾದಕ ದ್ರವ್ಯದ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಹೇಳಿವುದರೊಂದಿಗೆ ಮಾದಕ ವಸ್ತುಗಳ ಸಾಗಾಟ/ಮಾರಾಟದ ಕುರಿತಂತೆ ಗುಪ್ತ ಮಾಹಿತಿಯನ್ನು ಕಲೆಹಾಕುವಂತೆ ಸೂಚಿಸಲಾಗಿದೆ.
- ರಾತ್ರಿ ವೇಳೆಯಲ್ಲಿ ಅನುಮಾನಾಸ್ಪದವಾಗಿ ಸಂಚರಿಸುವ ವ್ಯಕ್ತಿಗಳು/ವಾಹನಗಳನ್ನು ತಪಾಸಣೆ ನಡೆಸಲಾಗುತ್ತಿದೆ.

- ಈ ಹಿಂದೆ ಮಾದಕ ವಸ್ತುಗಳ ಸಾಗಾಟ, ಮಾರಾಟ ಹಾಗೂ ಸೇವನೆಯಲ್ಲಿ ಭಾಗಿಯಾದ ಆರೋಪಿಗಳ ಚಲನವಲನದ ಮೇಲೆ ನಿಗಾ ಇರಿಸಲಾಗುತ್ತಿದೆ

**ಅಪರಾಧ ತಡೆಗಟ್ಟುವಿಕಗೆ (Crime Prevention)**

- ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ.
- ಅಧೀನ ಠಾಣೆಗಳಲ್ಲಿ ಲಭ್ಯವಿರುವ ಅಧಿಕಾರಿ/ಸಿಬ್ಬಂದಿಯವರನ್ನು ಪಿಕೆಟಿಂಗ್ ಪಾಯಿಂಟ್, ಚೆಕ್ ಪಾಯಿಂಟ್, ರೌಂಡ್ಸ್ ಕರ್ತವ್ಯಕ್ಕೆ ನಿಯೋಜಿಸಿ ಕಾನೂನು ಸುವ್ಯವಸ್ಥೆಗೆ ಯಾವುದೇ ಭಂಗಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ.
- ಸಾರ್ವಜನಿಕರೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದು ಎಲ್ಲಾ ವರ್ಗದ ಜನರಿಗೂ ಸಹ ಯಾವುದಾದರೂ ತೊಂದರೆ ಆದಲ್ಲಿ ಕಾನೂನು ರೀತಿ ಕ್ರಮ ಕೈಗೊಂಡು ರಕ್ಷಣೆಯನ್ನು ನೀಡಲಾಗುತ್ತಿದೆ.
- ವಿವಿಧ ಕೋಮುಗಳ ಮುಖಂಡರುಗಳನ್ನು ಕರೆದು ಶಾಂತಿ ಸಭೆ ನಡೆಸಲಾಗುತ್ತಿದೆ ಹಾಗೂ ಯೂತ್ ಕಮಿಟಿ, ಮೊಹಲ್ಲಾ ಕಮಿಟಿ ಸಭೆಯನ್ನು ನಡೆಸಲಾಗುತ್ತಿದ್ದು ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ನೊಂದ ವ್ಯಕ್ತಿಗಳು ದೂರವಾಣಿ ಮೂಲಕ ನಿಸ್ತಂತು ಕೇಂದ್ರಕ್ಕೆ ಮಾಹಿತಿ ನೀಡುವ ಸಲುವಾಗಿ ಡಯಲ್-112 ದೂರವಾಣಿ ಸಂಪರ್ಕ, ಮಹಿಳೆಯರು ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಾಗಿ ದೂರವಾಣಿ ನಂಬರ್-1092 ಹಾಗೂ 1098 ಚಾಲನೆಯಲ್ಲಿರುತ್ತದೆ.
- ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೊಲೀಸ್ ನೋಟೀಸ್ ನೀಡಿ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.
- ದೇವಸ್ಥಾನ/ ಮಸೀದಿ/ ಚರ್ಚ್/ ಬ್ಯಾಂಕ್/ಎಟಿಎಂ/ಜ್ಯೂಯಲರಿ ಶಾಪ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಜಾರಿ ಮಾಡಲಾಗಿರುತ್ತದೆ. ಮತ್ತು ಸಂಬಂಧಪಟ್ಟ ಮಾಲೀಕರುಗಳಿಗೆ Burglary Alarm ಅಳವಡಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.
- ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಂ, ಪೊಲೀಸ್ ವೆಬ್‌ಸೈಟ್‌ಗಳನ್ನು ಬಳಸಿ ಸಾರ್ವಜನಿಕರಿಗೆ ಅಪರಾಧಿಕ ಕೃತ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಮಾಲೀಕರುಗಳು ತಮ್ಮ ಮನೆಯನ್ನು ಬಾಡಿಗೆಗೆ ಕೊಡುವಾಗ ಬಾಡಿಗೆದಾರರ ಪೂರ್ವಪರಗಳನ್ನು ವಿಚಾರ ಮಾಡಿ ನೈಜ ದಾಖಲಾತಿಗಳೊಂದಿಗೆ

ಮನೆ ಬಾಡಿಗೆಗೆ ಕೊಡುವುದು ಹಾಗೂ ಬಾಡಿಗೆದಾರರ ಮನೆಗೆ ಬಂದು-ಹೋಗುವವರ ಮೇಲೆ ನಿಗಾ ಇಡಲು ನಾಗರೀಕ ಸದಸ್ಯರ ಸಭೆಯಲ್ಲಿ ಕೋರಲಾಗಿರುತ್ತದೆ.

- ಸರಗಳ್ಳತನ ಮಾಡುವ ಎಮ್.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ.
- ಪ್ರಸ್ತುತ 112 ಇ.ಆರ್.ಎಸ್.ಎಸ್ ವಾಹನ ಕಾರ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿ ಫೋನ್ ಕರೆಮಾಡಿದಾಗ ತುರ್ತಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ.
- ರಾತ್ರಿ ಗಸ್ತನ್ನು ಚುರುಕುಗೊಳಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ
- ಮಹಿಳೆ ಮತ್ತು ಮಕ್ಕಳ ರಕ್ಷಣೆಯ ಸಲುವಾಗಿ ಪಡೆಯನ್ನು ರಚಿಸಲಾಗಿದ್ದು, ಸದರಿ ಸಿಬ್ಬಂದಿಯವರು ಶಾಲಾ-ಕಾಲೇಜು ಹಾಗೂ ಮಹಿಳಾ ವಸತಿ ನಿಲಯಗಳ ಕಡೆಗೆ ಚುರುಕಾಗಿ ಪೆಟ್ರೋಲಿಂಗ್ ಮಾಡಿ ಮಹಿಳೆಯರಿಗೆ ರಕ್ಷಣೆ ಒದಗಿಸಲಾಗುತ್ತಿದೆ.

**ಕಮ್ಯೂನಿಟಿ ಪೊಲೀಸಿಂಗ್ (Community Policing)**

- ಅಪರಾಧ ತಡೆಗಟ್ಟಲು ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.
- ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗುತ್ತಿದೆ.
- ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ.
- ಪೊಲೀಸ್ ಠಾಣಾ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಸಾರ್ವಜನಿಕರ ಸಂಪರ್ಕವನ್ನು ಹೊಂದಿ ಪ್ರತಿಯೊಂದು ಆಗು ಹೋಗುಗಳ ಮೇಲೆ ನಿಗಾವಹಿಸಿ ಅಪರಾಧ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು ಎಲ್ಲಾ ವರ್ಗದ ಜನರಿಗೂ ಸಹ ಯಾವುದಾದರೂ ತೊಂದರೆ ಆದಲ್ಲಿ ತಕ್ಷಣ ಕಾನೂನು ರೀತ್ಯಾ ಕ್ರಮ ಕೈಕೊಂಡು ರಕ್ಷಣೆಯನ್ನು ನೀಡಲಾಗುತ್ತಿದೆ.
- ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಎಲ್ಲಾ ಕೋಮಿನ ಜನರನ್ನು ಸೇರಿಸಿ ಜನಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಕೊಲೆ, ಸುಲಿಗೆ, ಮರಳು ಮಾಫಿಯಾ, ಡ್ರಗ್ಸ್ ಮಾಫಿಯಾ ಮತ್ತು ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಿರುವುದಿಲ್ಲ. ಇಂತಹ ಘಟನೆಗಳ ಬಗ್ಗೆ ಮುಂಗಡ ಮಾಹಿತಿ ಸಂಗ್ರಹಿಸಲು ಅಧೀನ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಿದ್ದು, ಇಂತಹ ಘಟನೆಗಳು

ಕಂಡು ಬಂದಲ್ಲಿ ಕೂಡಲೇ ನಿಯಮಾನುಸಾರ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಿ, ರಾಜ್ಯದಲ್ಲಿ ಅಶಾಂತಿ ಮತ್ತು ಭಯದ ವಾತಾವರಣ ನಿರ್ಮಾಣವಾಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಕಾನೂನು ಮತ್ತು ಸುವ್ಯಸ್ಥೆಯನ್ನು ಕಾಪಾಡಲಾಗುವುದು. ಪ್ರಸ್ತುತ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ನಿಯಂತ್ರಣದಲ್ಲಿರುತ್ತದೆ.

---

**ಹೆಚ್‌ಡಿ** 350 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹಸಚಿವರು